ಮಂತ್ರಿಯವರಿಂದ ಹೇಳಿಕೆ

ಅಂಗನವಾಡಿ ಕಾರ್ಯಕರ್ತರ ಮುಷ್ಕರದ ಬಗ್ಗೆ

ಶ್ರೀ ಜಿ. ಬಸವಣ್ಣಪ್ಪ (ಸಮಾಜಕಲ್ಯಾಣ ಸಚಿವರು).—ಅಧ್ಯಕ್ಷರೇ ರಾಜ್ಯದ ಅಂಗನವಾಡಿ ನೌಕರರು ಮುಷ್ಕರ ಹೂಡಿದ್ದಾರೆಂದು ತಿಳಿದು ಬಂದಿದೆ. ಇದಕ್ಕೆ ಕಾರಣ ನಾನು ಮತ್ತು ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಶಿವಕಾಂತ ಚತುರೆಯವರು ಮಾತನಾಡಿದ ಭಾಷಣದ ಅರ್ಥವನ್ನು ತಪ್ಪಾಗಿ ಅರ್ಥ ಮಾಡಿಕೊಳ್ಳಲಾಗಿದೆಯೆಂದು ತಿಳಿದು ಬಂದಿದೆ. ಪುಟ್ಟಣ್ಣ ಶೆಟ್ಟಿ ಟೌನ್‌ಹಾಲ್‌ನಲ್ಲಿ ರಾಜ್ಯ ಮಟ್ಟದ ಅಂಗನವಾಡಿ ಕೆಲಸಗಾರರ ಸಮ್ಮೇಳನ ನಡೆಯಿತು. ನಾನು ಮುಖ್ಯ ಅತಿಥಿಯಾಗಿ ಭಾಷಣ ಮಾಡುವಾಗ ಹೇಳಿದೆ ಸಮಗ್ರ ಬಾಲ ವಿಕಾಸ ಯೋಜನೆ ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಅತ್ಯಂತ ಪ್ರಾಮುಖ್ಯವಾದ ಯೋಜನೆ ಇದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಂಯೋಗದಿಂದ ನಡೆಯುತ್ತಿರುವ ಕಾರ್ಯಕ್ರಮ. ಇದರ ಉದ್ದೇಶವೇನೆಂದರೆ ನಮ್ಮ ರಾಜ್ಯ ಹಾಗೂ ಕೇಂದ್ರದಲ್ಲಿ ೧೦೦೦ ಮಕ್ಕಳ ಪೈಕಿ ೧೨೦ ಮಕ್ಕಳು ಸಾಯುತ್ತಿದ್ದಾರೆ ಅದನ್ನು ೫೦ಕ್ಕೆ ಇಳಿಸಬೇಕೆಂದು ಈ ಯೋಜನೆಯು ಗುರಿ. ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾದ ಮೇಲೆ ಕೆಲಸವನ್ನು ರಿವ್ಯೂ ಮಾಡಿ ಗುರಿ ಮುಟ್ಟಲಾಗಿಲ್ಲ. ೫೦ಕ್ಕೆ ಇಳಿಸಬೇಕಾಗಿದ್ದದ್ದು ೮೦ಕ್ಕೆ ಇಳಿದಿದೆ. ಆರೋಗ್ಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ನಡುವೆ ಕೋ ಆರ್ಡಿನೇಷನ್ ಇರಬೇಕು. ಚುಚ್ಚು ಮದ್ದು ಕೊಡುವಾಗ ಅಂಗನವಾಡಿ ಕಾರ್ಮಿಕರು ಬಿಸಿ ನೀರನ್ನು ಕೊಡಬೇಕು ಸ್ಪರ್‌ಲೈಜ್ ಮಾಡಬೇಕಾಗುತ್ತದೆ. ನೀವೆಲ್ಲ ಸಮಾಜಸೇವಾ ಕರ್ತರು ನಿಮ್ಮ ಜವಾಬ್ದಾರಿ ಗುರುತರವಾದುದು ಎಂದು ಅವರನ್ನು ಹೊಗಳಿಯೇ ಹೇಳಿದ್ದೇನೆ. ಹಾಗೆಯೇ ಆರೋಗ್ಯ ಇಲಾಖೆಯವರಿಗೂ ಅವರ ಜವಾಬ್ದಾರಿ ಬಗ್ಗೆ ಹೇಳಿದೆ. ಅದನ್ನು ಪತ್ರಿಕೆಯಲ್ಲಿ ಹಾಕುವಾಗ ಕಾರ್ಮಿಕರನ್ನು ಟೀಕಿಸಿದರು ಎಂದು ಹಾಕಿದ್ದಾರೆ. ಅಂಗನವಾಡಿ ಕಾರ್ಯಕರ್ತರನ್ನು ಗೌರವದಿಂದ ಕಾಣಬೇಕು ಎಂದು ನಮ್ಮ ಇಲಾಖೆಯ ಅಧಿಕಾರಿಗಳಿಗೂ ಹೇಳಿದ್ದೇನೆ. ಕೆಲಸ ಕಾರ್ಯಗಳು ಚೆನ್ನಾಗಿ ಆಗಬೇಕು. ಸರಕಾರದ ಪರವಾಗಿ ಸಮಾಜ ಕಲ್ಯಾಣ ಮಂತ್ರಿಯಾಗಿ ಅಂಗನವಾಡಿ ಕಾರ್ಯಕರ್ತರನ್ನು ಅಪಾರವಾಗಿ ಕಾಣಬೇಕು ಎಂದು ಹೇಳಿದ್ದೇನೆ, ನನಗೂ ಕೂಡ ಅವರ ಬಗ್ಗೆ ಅಪಾರವಾದ ಗೌರವವಿದೆ ಅವರು ಆನರರಿ ವರ್ಕರ್ಸ್ ಅವರ ಬಗ್ಗೆ ಗಮನಕೊಟ್ಟು ೨೫ ರೂಪಾಯಿ ಜಾಸ್ತಿ ಮಾಡಿದ್ದೇನೆ ಸೇವಿಕೆಯರಿಗೆ ೯೦ ರೂ ಇದ್ದುದನ್ನು ೧೭೦ ರೂ, ಮಾಡಿದ್ದೇವೆ, ಅವರ ಸಂಬಳಕ್ಕೆ ಸಂಬಂಧಿಸಿದಂತೆ ಅದಕ್ಕೆ ಮನ್ನಣೆಯನ್ನು ಕೊಡುತ್ತೇನೆ ಮತ್ತು ಅವರನ್ನು ಗೌರವದಿಂದ ಕಾಣುತ್ತೇನೆ ಮತ್ತು ನಮ್ಮ ಇಲಾಖೆಯ ಅಧಿಕಾರಿಗಳಿಗೂ ಕೂಡ ಗೌರವದಿಂದ ಕಾಣಬೇಕೆಂದು ಹೇಳಿದ್ದೇನೆ. ಎ ಎನ್ ಎಂ ಗಳಿಗೆ ಸಂಬಳ ಜಾಸ್ತಿ ಬರುತ್ತದೆ ಇವರಿಗೆ ಕಡಿಮೆ ಬರುತ್ತದೆ ಎಂಬ ಭಾವನೆಯಿಂದ ಕಾಣುವಂಥಾದ್ದು ಸರಿಯಲ್ಲ. ಅಂಗನವಾಡಿ ಕಾರ್ಯಕರ್ತರನ್ನೂ ಕೂಡ ಗೌರವದಿಂದ ಕಾಣಬೇಕೆಂದು ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ.

ಶ್ರೀ ಯು. ಭೂಪತಿ.—ಸಮಾಜದಲ್ಲಿ ಎಲ್ಲರೂ ಕೂಡ ಗೌರವದಿಂದ ಅವರನ್ನು ಕಾಣಬೇಕೆಂದರೆ ಅವರ ಜೀವನಕ್ಕೆ ಸಾಲುವಷ್ಟು ಸಂಬಳವನ್ನು ಕೊಡಿ.

ಶ್ರೀ ಜಿ. ಬಸವಣ್ಣಪ್ಪ.—ಅವರ ಸಂಬಳದ ಬಗ್ಗೆ ಹೇಳಿದ್ದಾರೆ. ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಯೋಜನೆ ಇದೆ. ಈ ಕಾರ್ಯಕ್ರಮ ಬಹಳ ಮಹತ್ವವಾದುದು. ಅಂಗನವಾಡಿ ಕಾರ್ಯಕರ್ತರನ್ನು ತೆಗೆದುಕೊಳ್ಳುವಾಗ ಆ ವ್ಯಾಪ್ತಿಯಲ್ಲಿರುವವರನ್ನು ತೆಗೆದುಕೊಳ್ಳಬೇಕು ಅದೇ ಊರಿನವರು ಆಗಿರಬೇಕು ಅವರಿಗೆ ಆನರರಿಯಂ ಎಂದೂ ೨೫೦ ರೂ.ಕೊಡುತ್ತೇವೆ ಇದು ಸಂಬಳ ಅಲ್ಲ. ಅವರು ಗೌರವಾನ್ವಿತವಾಗಿ ಕೆಲಸ ಮಾಡತಕ್ಕಂತಹ ಒಂದು ಸದುದ್ದೇಶಕ್ಕೆ ಆನರರಿಯಂ ಕೊಡುವ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ. ನಮ್ಮನ್ನು ಸರಕಾರೀ ನೌಕರರನ್ನಾಗಿ ಮಾಡಬೇಕು ಅನರರಿಯಂ ಜಾಸ್ತಿ ಮಾಡಬೇಕು ಎಂಬ ಕೆಲವು ಬೇಡಿಕೆಗಳು ಇದೆ. ಅವರನ್ನು ಸರಕಾರೀ ನೌಕರರನ್ನಾಗಿ ಮಾಡಿಕೊಳ್ಳಬೇಕೆಂಬ ಉದ್ದೇಶ ರಾಜ್ಯ ಸರಕಾರಕ್ಕೂ ಇಲ್ಲ, ಕೇಂದ್ರ ಸರಕಾರಕ್ಕೂ ಇಲ್ಲ. ಆರೀತಿಯಾದರೆ ಇದರ ಉದ್ದೇಶವೇ ಫೇಲ್ ಆಗುತ್ತದೆ. ಅವರು ಆನರರಿಯಂ ನೌಕರರಾಗಿಯೇ ಇರಬೇಕು. ಅವರು ಬಹಳ ಮಹತ್ತರವಾದ ಕಾರ್ಯಕ್ರಮವನ್ನು ನಿರ್ವಹಿಸುತ್ತಾರೆ.

ಶ್ರೀ ಕೆ-ಹೆಚ್. ಪಾಟೀಲ್.—ತಾವು ಅವರಿಗೆ ಗೌರವವನ್ನು ಕೊಡುತ್ತೀರಿ ಎಂದು ಗೊತ್ತಾಯಿತು ಮತ್ತು ಅಧಿಕಾರಿಗಳು ಕೂಡ ಅವರಿಗೆ ಗೌರವವನ್ನು ಕೊಡಬೇಕೆಂದು ಹೇಳಿದ್ದೀರಿ ಅದು ಇರಲಿ. ಇಂತಹ ಸಾರ್ವಜನಿಕ ಸೇವೆಯನ್ನು ಮಾಡುವಂತಹ ಜನ ಇರುವಾಗ, ಅವರಿಗೆ ಸ್ವಲ್ಪ ಹೆಚ್ಚು ದುಡ್ಡನ್ನು ಕೊಡುವ ಪ್ರಯತ್ನ ಏಕೆ ಮಾಡಬಾರದು ?

ಶ್ರೀ ಜಿ. ಬಸವಣ್ಣಪ್ಪ.—ಈ ಯೋಜನೆ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಸಹ ಯೋಜನೆ. Administrative cost and training cost is met by the Government of India and SNP cost is met by the Government of Karnataka. I am one with you to recommend this matter to Government of India.

ಅಧ್ಯಕ್ಷರು.—ಈಗ ಸಭೆಯನ್ನು ನಾಳೆ ಬೆಳಿಗ್ಗೆ ೧೧-೦೦ಕ್ಕೆ ಮುಂದೂಡಲಾಗಿದೆ.

ಸದನವು ೬-೦೦ಕ್ಕೆ ಮುಕ್ತಾಯವಾಗಿ ತಾ. ೮-೯-೧೯೮೭ ರಂದು ಬೆಳಿಗ್ಗೆ ೧೧-೦೦ ಗಂಟೆಗೆ ಸೇರಲು ನಿಶ್ಚಯಿಸಿತು.